10 ಹುಮನಾಬಾದ್ ತಾ: ಹುಣಸ್ಯಾಳ ಹತ್ತಿರ ಇಂಗುಕೆರೆ ಅಭಿವೃದ್ಧಿ 15.50

1033 (1523) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಪ್ರಸಕ್ತ ಸಾಲಿನ ಆಯವ್ಯಯದ ಮಂಡನೆಯ ಬಳಿಕ ರಾಜ್ಯದ ಹಣಕಾಸಿನ ಬಳಿಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಆಶಾದಾಯಕವಾಗಿದೆಯೇ;

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ವಿತ್ತೀಯ ಕೊರತೆಯನ್ನು ಸರಿದೂಗಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ?

ಈ) ಪ್ರಸಕ್ತ ಸಾಲಿನ ಸಂಪನ್ಮೂಲ ಕ್ರೋಢೀಕರಣದ ವಿವರಗಳೇನು?

ಉ) ಪ್ರಸಕ್ತ ಸಾಲಿನಲ್ಲಿ ವಾಣಿಜ್ಯ ತೆರಿಗೆ, ಅಬ್ಕಾರಿ ತೆರಿಗೆ, ಸಾರಿಗೆ ಸ್ಟಾಂಪುಗಳ ನೋಂದಣಿ ಇಲಾಖೆಯಿಂದ ಎಷ್ಟು ತೆರಿಗೆ ಆದಾಯವನ್ನು ನಿರೀಕ್ಷಿಸಲಾಗಿದೆ?

ಊ) ಕಳೆದ ಸಾಲಿನಲ್ಲಿ ಮೇಲ್ಕಂಡ ಇಲಾಖೆಗಳಿಂದ ಎಷ್ಟು ತೆರಿಗೆ ಆದಾಯದ ಶೇಕಡಾವಾರು ಗುರಿ ಹೊಂದಲಾಗಿತ್ತು ಇದರಲ್ಲಿ ಎಷ್ಟು ಶೇಕಡಾವಾರು ಗುರಿ ಸಾಧನೆ ಮಾಡಲಾಯಿತು? (ಪ್ರತಿಯೊಂದು ಇಲಾಖೆಯ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಋ) ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ಈವರೆವಿಗೆ ಕೇಂದ್ರದಿಂದ ವಿವಿಧ ಯೋಜನೆಗಳಿಗಾಗಿ ಬಂದಿರುವ ಹಣವೆಷ್ಟು?

ಎ) ಇದನ್ನು ಹೊರತುಪಡಿಸಿದಂತೆ ರಾಜ್ಯ ಸರ್ಕಾರವು ಆರ್.ಬಿ.ಐ.ನಿಂದ ಓವರ್ ಡ್ರಾಫ್ಟ್ ಸೌಲಭ್ಯವನ್ನಾಗಲಿ ಅಥವಾ ವಿಮೆ ಕಂಪನಿಗಳಿಂದ ಅಥವಾ ಕೇಂದ್ರ ಅಥವಾ ರಾಜ್ಯದ ವಿವಿಧ ಸಂಸ್ಥೆಗಳಿಂದ ಸಾಲವನ್ನೇನಾದರೂ ಪಡೆದುಕೊಂಡಿದೆಯೇ ಅಥವಾ ಸಾಲಕ್ಕಾಗಿ ಪ್ರಸ್ತಾವನೆ ಸಲ್ಲಿಸಿದೆಯೇ; ಇದ್ದಲ್ಲಿ ವಿವರಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯದ ಹಣಕಾಸು ಪರಿಸ್ಥಿತಿ ತೃಪ್ತಿಕರವಾಗಿದೆ.

ಆ) ಆಯವ್ಯಯದಲ್ಲಿ ಸಂಪನ್ಮೂಲ ಮತ್ತು ವೆಚ್ಚಗಳಿಗಾಗಿ ಮಾಡಲಾದ ಪ್ರಕ್ಷೇಪಣಗಳು (projections) ಸರಿಯಾದ ಹಾದಿಯಲ್ಲಿದೆ ಮತ್ತು ಆಯವ್ಯಯದಲ್ಲಿ ಅಂದಾಜು ಮಾಡಲಾದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನಿರೀಕ್ಷೆಯಿದೆ.

ಇ) ಸರ್ಕಾರವು ವಿತ್ತೀಯ ಸುಧಾರಣೆ ಅಧಿನಿಯಮವನ್ನು ಜಾರಿಗೆ ತಂದಿರುತ್ತದೆ. ಅಂದಾಜಿಸಲಾದ ವಿತ್ತೀಯ ಕೊರತೆಯಾದ 5210.57 ಕೋಟಿ ರೂಪಾಯಿಗಳು ಜಿಎಸ್‌ಡಿಪಿಯ ಶೇಕಡ 2.82ರಷ್ಟಿರುತ್ತದೆ. ಸರ್ಕಾರದ ಸಾಲ ಪಡೆಯುವ ಕಾರ್ಯಕ್ರಮವು ಸಾಲದ ಲಭ್ಯತೆಗಿಂತ ಹೆಚ್ಚಾಗಿ ಸಾಲ ಮರುಪಾವತಿ ಸಾಮರ್ಥ್ಯವನ್ನು ಆಧರಿಸಿದೆ. ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲ

ಸಂಗ್ರಹಣೆಯಲ್ಲಿ ಗಣನೀಯ ಹೆಚ್ಚಳ ಸಾಧನೆ, ಅಭಿವೃದ್ಧಿಯೇತರ ವೆಚ್ಚದಲ್ಲಿ ಕಡಿತಕ್ಕೆ ಕ್ರಮ, ಎಲ್ಲಾ ವಲಯಗಳಲ್ಲೂ ಸಹಾಯಧನದ ಸೂಕ್ತ ನಿರ್ವಹಣೆಯನ್ನು ಖಚಿತಪಡಿಸುವುದು, ಸಾರ್ವಜನಿಕ ವೆಚ್ಚಗಳ ಉತ್ಪಾದಕತೆಯಲ್ಲಿ ಸುಧಾರಣೆ, ಸಂಪನ್ಮೂಲ ಸಂಗ್ರಹಣೆಯಲ್ಲಿ ಆದಾಯ ಸೋರಿಕೆ ತಡೆಗಟ್ಟುವುದರಿಂದ ವಿತ್ತೀಯ ಕೊರತೆಯನ್ನು ಸರಿದೂಗಿಸಬಹುದು.

ಈ) ಪ್ರಸಕ್ತ ಸಾಲಿಗಾಗಿ ಈ ಕೆಳಕಂಡ ಬಾಬ್ತುಗಳಿಂದ ಸರ್ಕಾರವು ಸಂಪನ್ಮೂಲವನ್ನು ಕ್ರೋಢೀಕರಿಸಲು ಅಂದಾಜಿಸಿದೆ :

	(ರೂ. ಕೋಟಿಗಳಲ್ಲಿ)
ತೆರಿಗೆ ರಾಜಸ್ವ	27142.68
ತೆರಿಗೆಯೇತರ ರಾಜಸ್ವ	4088.43
ಕೇಂದ್ರದ ಅನುದಾನ	4643.96
ಸಾರ್ವಜನಿಕ ಋಣ	3729.41
ಸಾಲ/ಮುಂಗಡಗಳ ವಸೂಲಾತಿ	44.60
ಒಟ್ಟು	**39649.09**

ಉ) ವಿವರಗಳು ಈ ರೀತಿ ಇವೆ :

	(ರೂ. ಕೋಟಿಗಳಲ್ಲಿ)
ವಾಣಿಜ್ಯ ತೆರಿಗೆ	14190.50
ಅಬ್ಕಾರಿ	4060.33
ಸಾರಿಗೆ	1285.00
ಮುದ್ರಾಂಕ ಮತ್ತು ನೋಂದಣಿ	2586.11

ಊ)

ಇಲಾಖೆ	2005-06 ಗುರಿ	2005-06 ಸಾಧನೆ (ತಾತ್ಕಾಲಿಕ)	ಶೇಕಡವಾರು ಗುರಿ
ವಾಣಿಜ್ಯ ತೆರಿಗೆ	11998.44	13544.29	112.88
ಅಬ್ಕಾರಿ	3025.00	3413.97	112.86
ಸಾರಿಗೆ	1178.00	1166.86	99.05
ಮುದ್ರಾಂಕ ಮತ್ತು ನೋಂದಣಿ	2250.00	2373.33	105.48

ಋ) ಜೂನ್ 2006ರ ಅಂತ್ಯದವರೆಗೆ ಕೇಂದ್ರದಿಂದ ಸ್ವೀಕರಿಸಿದ ಮೊಬಲಗು.

	(ರೂ. ಕೋಟಿಗಳಲ್ಲಿ)
ಅನುದಾನ	748.16
ಡೆವಲ್ಯೂಷನ್	1447.08

ಎ) ಪ್ರಸಕ್ತ ಸಾಲಿನಲ್ಲಿ ಯಾವುದೇ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆಯಲಾಗಿಲ್ಲ. ಜೂನ್ 2006ರ ಅಂತ್ಯದವರೆಗೆ ನಬಾರ್ಡ್‌ನಿಂದ 12.36 ಕೋಟಿ ರೂ. ಗಳನ್ನು ಸಾಲವಾಗಿ ಪಡೆಯಲಾಗಿದೆ.